# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 419/2019**

**ಸಿ.ಡಬ್ಲೂಃ 05 ಪಿಡಬ್ಲೂಃ 05**

ಸಾಕ್ಷಿದಾರರ ಹೆಸರುಃ ಲಕ್ಷ್ಮಣ ಕಾಂಬಳಿ ತಂದೆಃ ಬಸಪ್ಪ
ವಯಸ್ಸುಃ 47 ವರ್ಷ
ಉದ್ಯೋಗಃ ಪೊಲೀಸ್ ಮುಖ್ಯಪೇದೆ.
ವಾಸಃ ಹಡಗಲಿ.

ದಿಃ **17-03-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

ನಾನು 2015 ರಿಂದ 2017 ರವರೆಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

02. ದಿ.04-07-2017 ರಂದು ಮಧ್ಯಾಹ್ನ 03.00 ಗಂಟೆ ಸುಮಾರಿಗೆ ನಾನು ಹೊಳಲು ಪೊಲೀಸ್ ಉಪಠಾಣೆಯಲ್ಲಿದ್ದಾಗ ಚಾ.ಸಾ.01 ರವರು ನನಗೆ ಮತ್ತು ಚಾ.ಸಾ.2 ರಿಂದ 04 ರವರನ್ನು ಕರೆದು ಹೊಳಲು ಗ್ರಾಮದ ಗೋಣಿಬಸವೇಶ್ವರ ಗುಡಿಯ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿರುತ್ತದೆ ಎಂದು ತಿಳಿಸಿ ದಾಳಿಗೆ ಹೋಗೋಣ ಎಂದು ತಿಳಿಸಿರುತ್ತಾರೆ. ಆಗ ಚಾ.ಸಾ.02 ರವರಿಗೆ ದಾಳಿಗೆ ಹೋಗಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ ಮಧ್ಯಾಹ್ನ 03.10 ಗಂಟೆಗೆ ಚಾ.ಸಾ.02 ರವರು ಪಂಚರಾದ ಚಾ.ಸಾ.07 ಮತ್ತು 08 ರವರನ್ನು ಕರೆದುಕೊಂಡು ಬರಲು ಚಾ.ಸಾ.01 ರವರ ಮುಂದೆ ಹಾಜರುಪಡಿಸಿರುತಾತರೆ ಆಗ ಚಾ.ಸಾ.01 ರವರು ಪಂಚರಿಗೆ ಅವರಿಗೆ ಬಂದ ಬಾತ್ಮಿ ವಿಷಯವನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ಆಗ ಚಾ.ಸಾ.01 ರವರೊಂದಿಗೆ ನಾನು ಮತ್ತು ಚಾ.ಸಾ.02 ರಿಂದ 04 ಪಂಚರು ಸೇರಿ ನಮ್ಮ ಇಲಾಖಾ ವಾಹನದಲ್ಲಿ ಹೊಳಲು ಉಪಠಾಣೆಯಿಂದ ಮಧ್ಯಾಹ್ನ 03.10 ಗಂಟೆಗೆ ಹೊರಟು ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ 03.20 ಗಂಟೆಗೆ ತಲುಪಿರುತ್ತೇವೆ. ಸದರಿ ಸ್ಥಳದಲ್ಲಿ ನಮ್ಮ ಜೀಪನ್ನು ನಿಲ್ಲಿಸಿ ನಾವು ಕೆಳಗೆ ಇಳಿದು ಮರೆಯಾಗಿ

ನೋಡಲಾಗಿ ಸದರಿ ಗ್ರಾಮದ ಗೋಣಿಬಸವೇಶ್ವರ ಗುಡಿಯ ಹತ್ತಿರ ಒಂದು ಶೆಡ್ಡನ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಆಗ ನಾವು ಖಚಿತಪಡಿಸಿಕೊಂಡು ಆತನ ಮೇಲೆ ನಾವುಗಳು ದಾಳಿ ಮಾಡಿರುತ್ತೇವೆ. ಆಗ ಸದರಿ ವ್ಯಕ್ತಿಗೆ ಚಾ,ಸಾ.01 ರವರು ಆ ವ್ಯಕ್ತಿಯ ಹತ್ತಿರ ಹೋಗಿ ವಿಚಾರಿಸಲಾಗಿ ಆತನ ಹೆಸರು ಗುಜ್ಜರ ಸತೀಶ ತಂದೆ ಪಾಡುರಂಗ ಸಾಃ ಹೊಳಲು ಎಂದು ತಿಳಿಸಿರುತ್ತಾರೆ. ಮತ್ತು ಆತನಿಗೆ ಚಾ.ಸಾ.01 ರವರು ಆಗ ಸದರಿ ವ್ಯಕ್ತಿಯನ್ನು ಮಧ್ಯ ಸಾಗಾಣಿಕೆ ಮಾಡಲು ಪರವಾನಿಗೆ ಕೇಳಲಾಗಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಆಗ ನಾವುಗಳು ಆತನ ಬಳಿ ಇದ್ದ ಒಂದು ರಟ್ಟಿನ ಡಬ್ಬವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ ಕೊಡೆಸ್ XXX 180 ಎಮ್.ಎಲ್.ನ 12 ಪೌಚಗಳು ಮತ್ತು 180 ಎಮ್.ಎಲ್.ನ ನಂಬರ 1 ಹೈವರ್ಡ್ಸ್ ವಿಸ್ಕೀಯ 10 ಬಾಟಲಗಳು ಇದ್ದವು. ಆಗ ಚಾ.ಸಾ.01 ರವರು ಸದರಿ ವ್ಯಕ್ತಿಗೆ ಅಂಗಶೋಧನೆ ಮಾಡಲಾಗಿ ಆತನ ಅಂಗಿಯ ಜೇಬಿನಲ್ಲಿ 1590/- ನಗದು ಹಣ ದೊರೆತಿರುತ್ತದೆ. ಸದರಿ ಹಣದ ಕುರಿತು ಆ ವ್ಯಕ್ತಿಗೆ ವಿಚಾರಿಸಲಾಗಿ ಆ ಹಣವು ಮಧ್ಯ ಮಾರಾಟದಿಂದ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಆತನ ಬಳಿ ಇದ್ದ ಮಧ್ಯ ಮತ್ತು ಹಣವನ್ನು ಸ್ಥಳದಲ್ಲಿ ಅಮಾನತ್ತು ಪಡೆಸಿಕೊಂಡು ಮಧ್ಯಾಹ್ನ 03.30 ರಿಂದ 04.40 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿ ಚಾ.ಸಾ,01 ರವರು ಹೇಳಿದಂತೆ ನನ್ನ ಹಸ್ತಾಕ್ಷರದಿಂದ ಪಂಚನಾಮೆಯನ್ನು ಬರೆದಿರುತ್ತೇನೆ. ನಂತರ ಚಾ.ಸಾ.01 ಮತ್ತು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡ ಮಧ್ಯವನ್ನು SHO ಅಂತ ಸೀಲು ಮಾಡಿ ಒಂದು ರಟ್ಟಿನ ಡಬ್ಬದಲ್ಲಿ ಹಾಕಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ತದನಂತರ ಚಾ.ಸಾ.01 ರವರು ಆರೋಪಿ, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ವಾಪಸ್ಸು ಬಂದು ಆರೋಪಿತನ ವಿರುದ್ಧ ಚಾ.ಸಾ.11 ರವರ ಮುಂದೆ ದೂರು ದಾಖಲಿಸಿರುತ್ತಾರೆ. ಸಾಕ್ಷಿಗೆ ನಿ.ಪಿ.01 ರ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನಾನು ನನ್ನ ಹಸ್ತಾಕ್ಷರದಿಂದ ಬರೆದಿರುವ ಪಂಚನಾಮೆ ಆಗಿದ್ದು ಅದಕ್ಕೆ ನನ್ನ ದಸ್ತೂರು ಸಹಿ ಮಾಡಿರುತ್ತೇನೆ ಎಂದು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.01 ಸಿ. ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಮು.ಮಾ.01 ರಿಂದ 19 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ ಘಟನಾ ದಿನದಂದು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯಾಗಿರುತ್ತಾನೆ ಎಂದು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. **KK** ವಕೀಲರಿಂದಃ

**03.** ಹೊಳಲು ಉಪಠಾಣೆಯಿಂದ ಗೋಣಿಬಸವೇಶ್ವರ ದೇವಸ್ಥಾನ **500** ಮೀಟರ ಒಳಗಡೆ ಇರುತ್ತದೆ ಮತ್ತು ಠಾಣೆಯಿಂದ ಪೂರ್ವಕ್ಕೆ ಇರುತ್ತದೆ. ದೇವಸ್ಥಾನದ ಯಾವ ದಿಕ್ಕಿಗೆ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ ಎಂದು ನನಗೆ ನೆನಪು ಇರುವುದಿಲ್ಲ. ಗೋಣಿಬಸವೇಶ್ವರ ದೇವಸ್ಥಾನದಿಂದ **5** ಮೀಟರ ದೂರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ. ಶೆಡ್ಡಿನ ಮುಖವು ಪಶ್ಚಿಮ ದಿಕ್ಕಿಗೆ ಇರುತ್ತದೆ. ಇಲಾಖಾ ವಾಹನ ಯಾವುದು ಮತ್ತು ಅದರ ಸಂಖ್ಯೆ ನೆನಪು ಇರುವುದಿಲ್ಲ. ಇಲಾಖಾ ವಾಹನದ ಚಾಲಕ ಯಾರು ಎಂದು ನೆನಪು ಇರುವುದಿಲ್ಲ.

**04.** ಚಾ.ಸಾ.**02** ರವರು ಮಧ್ಯಾಹ್ನ **03.10** ಕ್ಕೆ ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಹಣದ ಎಷ್ಟು ನೋಟು ಇದ್ದವು ಮತ್ತು ಯಾವ ಮುಖಬೆಲೆಯ ನೋಟು ಇದ್ದವು ಎಂದು ಹೇಳಲು ಆಗುವುದಿಲ್ಲ. ಮು.ಮಾ.**1** ರಿಂದ **19** ರಂತಹ ಮಾಲುಗಳು ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ಇರಬಹುದು. ಒಬ್ಬ ಪಂಚರ ಒಟ್ಟು **2** ಸಹಿಯನ್ನು ಪಡೆದಿರುತ್ತೇವೆ. ಚಾ.ಸಾ.**07** ರವರ ಸಹಿಯನ್ನು ಮೊದಲು ಪಡೆದಿರುತ್ತೇವೆ. ಪಂಚನಾಮೆಯಲ್ಲಿ ಗುನ್ನೇ ನಂಬರನ್ನು ಬರೆದಿರುವುದಿಲ್ಲ. ಆ ದಿನ ನಾವು ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿದ್ದೇವು, ಅಲ್ಲಿ ಆರೋಪಿತನು ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುವಾಗ ಸಿಕ್ಕಿಬಿದ್ದಿರುತ್ತಾನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇವೆ, ಪಂಚರ ಸಹಿಯನ್ನು ಪಡೆದಿರುತ್ತೇವೆ, ಮುದ್ದೆಮಾಲನ್ನು ಜಪ್ತು ಮಾಡಿಕೊಂಡಿರುತ್ತೇವೆ, ರಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ. ಚಾ.ಸಾ.**1** ರವರು ಹೇಳಿದಂತೆ ನಾನು ಪಂಚನಾಮೆಯನ್ನು ಬರೆದಿರುತ್ತೇನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ, "ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.